7

# ಪರಿಶುದ್ಧಾತ್ಮನು ಹೇಗೆ ಮಾರ್ಪಡಿಸುವನು

ಪಾಪಿಯ ಮಾರ್ಪಡುವಿಕೆಯಲ್ಲಿ ಪರಿಶುದ್ಧಾತ್ಮನು ಹೇಗೆ ಕಾರ್ಯ ಮಾಡುವನೆಂಬ ಪ್ರಶ್ನೆಯು ಸಾಮಾನ್ಯವಾಗಿ ತಪ್ಪಾಗಿ ತಿಳಿಯಲ್ಪಟ್ಟಿದೆ, ರಹಸ್ಯೋಪದೇಶದಲ್ಲಿ ಅಡಗಿಸಲ್ಪಟ್ಟಿದೆ. ಪರಿಶುದ್ಧಾತ್ಮನ ಕಾರ್ಯವನ್ನು ಕುರಿತಾದ ಗಲಿಬಿಲಿಯು ಪರಿಶುದ್ಧಾತ್ಮನು ಇರುವನೋ ಇಲ್ಲವೋ ಎಂಬುದರ ಬಗ್ಗೆ ಅಥವಾ ಆತನು ಕಾರ್ಯ ಮಾಡುವನೋ ಇಲ್ಲವೋ ಎಂಬುದರ ಬಗ್ಗೆ ಇರುವದಿಲ್ಲ. ಸಾಮಾನ್ಯವಾಗಿ, ಈ ವಿಷಯಗಳ ಮೇಲೆ ಒಪ್ಪಂದವಿರುವುದು.

ಪಾಪಿಗಾಗಿ ಆತನು ಏನು ಮಾಡುತ್ತಾನೆ ಎಂಬುದರ ಬಗ್ಗೆ ಚರ್ಚೆ ಇರುವ ಅವಶ್ಯಕತೆಯಿಲ್ಲ. ಆತನು ಪಾಪದ ಮನವರಿಕೆ ಮಾಡುವನು, ವಿಶ್ವಾಸವನ್ನು ಹುಟ್ಟಿಸುವನು ಮತ್ತು ನಡಿಸುತ್ತಾನೆಂದು ನಾವು ಒಪ್ಪಿಕೊಳ್ಳುತ್ತೇವೆ. ಆತನು ಇವುಗಳನ್ನು ಹೇಗೆ ಮಾಡುವನು ಎಂಬುದು ನಿಜವಾದ ಪ್ರಶ್ನೆಯಾಗಿದೆ.

ಎರಡು ವಿಚಾರಗಳು ಸೂಚಿಸಲ್ಪಟ್ಟಿವೆ. ಆತನು ಕೂಡಲೇ ಮತ್ತು ಅದ್ಭುತಕರವಾಗಿ ಕಾರ್ಯ ಸಾಧಿಸುವುದು ಒಂದಾಗಿದೆ. ಇನ್ನೊಂದು ಆತನು ಮಾಧ್ಯಮದ ಮುಖಾಂತರ, ದೇವರ ವಾಕ್ಯದ ಮುಖಾಂತರ ಕಾರ್ಯ ಮಾಡುತ್ತಾನೆ. ಈ ವಿಷಯವನ್ನು ನಾವು ಚರ್ಚಿಸುವಾಗ ನಿಜವಾದ ಸ್ಥಾನ ಯಾವುದು ಎಂಬುದು ಪ್ರತ್ಯಕ್ಷವಾಗುವುದು.

## ಆತ್ಮನು ಯಾರು?

ಸ್ಪಷ್ಟ ಪಡಿಸತಕ್ಕ ಮೊದಲನೆಯ ಸಂಗತಿಯು ದೈವತ್ವದಲ್ಲಿಯ ಮೂರು ವ್ಯಕ್ತಿಗಳಲ್ಲಿ ಪರಿಶುದ್ಧಾತ್ಮನು ಒಬ್ಬನಾಗಿದ್ದಾನೆ. ಆದಿಕಾಂಡದಲ್ಲಿ ಮೊದಲಿನ ಭೌತಿಕ ಸೃಷ್ಟಿಯಲ್ಲಿ ಆತನು ನಮೂದಿಸಲ್ಪಟ್ಟಿದ್ದಾನೆ (1:2). ಅದಕ್ಕೆ ಕೂಡಿಸಿ ಮತ್ತಾಯ 28:19 ಮತ್ತು 1 ಯೋಹಾನ 5:8ರಂಥ ವಾಕ್ಯಗಳಲ್ಲಿ ದೇವರು ಮತ್ತು ಕ್ರಿಸ್ತನೊಂದಿಗೆ ಆತನು ಹೇಳಲ್ಪಟ್ಟಿದ್ದಾನೆ.

ವೈಯಕ್ತಿಕ ಸರ್ವನಾಮಗಳು ಆತನಿಗೆ ಸಂಬಂಧಿಸಿ ಆಗಾಗ ಉಪಯೋಗಿಸಲಪಟ್ಟಿವೆ (ಯೋಹಾನ 14:16, 17, 26). ವ್ಯಕ್ತಿತ್ವದ ಗುಣಲಕ್ಷಣಗಳು ಆತನಿಗೆ ಹೊಂದಿಸಲ್ಪಟ್ಟಿವೆ. ಆತನು ಬೋಧಿಸುತಾನೆ (ಲೂಕ 12:12; ಯೋಹಾನ 14:26), ಮಾತಾಡುತ್ತಾನೆ (ಇಬ್ರಿಯ 3:7; 1 ತಿಮೊಥೆ 4:1), ಹಾಗೂ ತಿಳಿದಿರುತ್ತಾನೆ (1 ಕೊರಿಂಥ 2:11). ಆತನು ಪ್ರಾರ್ಥನೆ ವಿಜ್ಞಾಪನೆ ಮಾಡುತ್ತಾನೆ (ರೋಮಾಪುರ 8:26). ದುಃಖ ಪಡಿಸಲ್ಪಡಲು ಸಾಧ್ಯವಾದವನಾಗಿರುತ್ತಾನೆ (ಎಫೆಸ 4:30).

ಪರಿಶದ್ಧಾತ್ಮನು ಜ್ಞಾನವುಳ್ಳ ವ್ಯಕ್ತಿಯೆಂದು ಮತ್ತು ಪಿಶಾಚಿಯಂತೆ ಅನೋಚರ ವಾದವನಲ್ಲವೆಂದು ನಾವು ಅರ್ಥ ಮಾಡಿಕೊಳ್ಳುವಾಗ, ಆತನ ಕಾರ್ಯಚರಣೆಯ ವಿಧಾನವು ಹೆಚ್ಚು ಸ್ಪಷ್ಟವಾಗುತ್ತದೆ. ಒಬ್ಬ ಬುದ್ಧಿವಂತ ಮಾನವನು ಇನ್ನೊಬ್ಬನ ಮೇಲೆ ಪ್ರಭಾವ ಬೀರುವ ರೀತಿ

ಯಲ್ಲಿಯೇ ಆತನು ಪ್ರಭಾವ ಬೀರಲು ಶಕ್ತನಾಗಿದ್ದಾನೆ.

## ಅಪೊಸ್ತಲರ ಸಮಯದಲ್ಲಿ ಮಾರ್ಪಡುವಿಕೆ

ಪರಿಶುದ್ಧಾತ್ಮನ ಕಾರ್ಯಚರಣೆಯ ರೀತಿಯನ್ನು ತೀರ್ಮಾನಿಸುವ ಅತ್ಯುತ್ತಮ ಮಾರ್ಗವು ಅಪೊಸ್ತಲರ ಸಮಯದಲ್ಲಿ ಮಾರ್ಪಡುವಿಕೆಯಲ್ಲಿ ಆತನ ಭಾಗವನ್ನು ಪರೀಕ್ಷಿಸುವದಾಗಿದೆ. ಅಪೊಸ್ತಲರ ಕೃತ್ಯಗಳ ಗ್ರಂಥವು ಮಾರ್ಪಡುವಿಕೆಗಳ ಪುಸ್ತಕವಾಗಿದೆ. ಈ ಪುಸ್ತಕದಿಂದ ಮಾರ್ಪಡುವಿಕೆಯ ಎರಡು ಘಟನೆಗಳನ್ನು ಆಯ್ದುಕೊಂಡು ಪ್ರತಿಯೊಂದರಲ್ಲಿ ಆತ್ಮನು ಹೇಗೆ ಕಾರ್ಯ ಮಾಡಿದನೆಂಬುದನ್ನು ಗಮನಿಸೋಣ.

ಪಾಪದ ಮನವರಿಕೆಮಾಡುವ ಮತ್ತು ಮಾರ್ಪಡಿಸುವಿಕೆಯ ತನ್ನ ಕಾರ್ಯವನ್ನು ಪ್ರಾರಂಭಿಸಲು ಪರಿಶುದ್ಧಾತ್ಮನು ಬಂದ ದಿನವನ್ನು ಅಪೊಸ್ತಲರ ಕೃತ್ಯ 2 ದಾಖಲೆ ಮಾಡುತ್ತದೆ. ಕೇಳುಗರಲ್ಲಿ ಇದ್ದವರ ಮೇಲೆ ಪರಿಶುದ್ಧಾತ್ಮನು ಹೇಗೆ ಕಾರ್ಯ ಮಾಡಿದನು? ಪೇತ್ರನಿಂದ ಮಾತಾಡಲ್ಪಟ್ಟ ವಾಕ್ಯಗಳ ಮುಖಾಂತರ ಮಾತ್ರವೇ ಅದನ್ನು ನೋಡಬಹುದು. ಮಾತಾಡುವದಕ್ಕೆ ಆತ್ಮನು ವಾಕ್ಕು ಶಕ್ತಿ ಕೊಟ್ಟಂತೆ ಅವನು ಮಾತಾಡುತ್ತಿದ್ದನು (ಮತಾಯ 10:20).

ಐಥಿಯೋಪ್ಯದ ಕಂಚುಕಿಯ ಕಥೆಯು ಅಪೊಸ್ತಲರ ಕೃತ್ಯ 8ರಲ್ಲಿ ಹೇಳಲ್ಪಟ್ಟಿದೆ. ನಿಶ್ಚಯವಾಗಿಯೂ, ಅವನು ಯಥಾರ್ಥವಾಗಿ ಮಾರ್ಪಡಿಸಲ್ಪಟ್ಟನು. ಆದರೆ ಆತ್ಮನಿಂದ ಅವನು ಮಾರ್ಪಡಿಸಲ್ಪಟ್ಟನೋ? ಹಾಗೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗಾದರೆ ಆತ್ಮನು ಅವನ ಮೇಲೆ ಹೇಗೆ ಪ್ರಭಾವ ಬೀರಿದನು? ಪರಿಶುದ್ಧಾತ್ಮನಿಂದ ಮಾತಾಡಲು ನಡಿಸಲ್ಪಟ್ಟ ಫಿಲಿಪ್ಪನ ಬೋಧನೆಯ ಮುಖಾಂತರ ಅದಾಗಿತ್ತೆಂದು ಮೇಲಿನಿಂದ ಮೇಲೆ ಓದುವದರಿಂದ ತಿಳಿಯುತ್ತದೆ.

ವಾಕ್ಯಗಳ ಮುಖಾಂತರ ಆದರೆ ವಾಕ್ಯಗಳನ್ನು ಬಿಟ್ಟು ಅಲ್ಲ, ಪರಿಶುದ್ಧಾತ್ಮನು ಕಾರ್ಯ ಮಾಡಿದನೆಂದು ಈ ಸಂಗತಿಗಳು ಪ್ರಕಟಿಸುತ್ತವೆ. ಪ್ರೇರೇಪಿತ ಜನರ ಪ್ರಸಂಗಗಳನ್ನು ಜನರು ಕೇಳಿದಾಗ, ಅವರು ಪರಿಶುದ್ಧಾತ್ಮನನ್ನು ಆಲಿಸುತ್ತಿದ್ದರು. ಈ ಮಾತುಗಳಿಂದ ಅವರು ಮಾರ್ಪಟ್ಟಾಗ, ಅವರು ಪರಿಶುದ್ಧಾತ್ಮನಿಂದ ಮಾರ್ಪಡಿಸಲ್ಪಟ್ಟರು. ಅವರು ಕೇಳಿದ್ದನ್ನು ತಿರಸ್ಕರಿಸಿದಾಗ ಅವರು ಆತ್ಮನನ್ನು ವಿರೋಧಿಸಿದರು (ಅಪೊಸ್ತಲರ ಕೃತ್ಯ 7:51, 52; ನೆಹಮಿಯ 9:30). ತನ್ನ ಬೋಧನೆಯನ್ನು ತಿರಸ್ಕರಿಸಿದವರನ್ನು ಪರಿಶುದ್ಧಾತ್ಮನನ್ನು ವಿರೋಧಿಸಿದರೆಂದು ಸ್ತೆಫನನು ದೂರಿದನು (ಅಪೊಸ್ತಲರ ಕೃತ್ಯ 7:51).

## ಪರಿಶುದ್ಧಾತ್ಮನು ಇಂದು ಜನರನ್ನು ಹೇಗೆ ಮಾರ್ಪಡಿಸುವನು?

ಅಪೊಸ್ತಲಿಕ ಸಮಯದಲ್ಲಾದ ಮಾರ್ಪಡುವಿಕೆಯಲ್ಲಿ ಪರಿಶುದ್ಧಾತ್ಮನು ಏನು ಮಾಡಿದ್ದರೋ ಈಗ ಮಾರ್ಪಡುವಿಕೆಯಲ್ಲಿಯೂ ಅದನ್ನೇ ಮಾಡುತ್ತಾನೆಯೋ? ಹೌದು. ಇಂದು ಪರಿಶುದ್ಧಾತ್ಮ ಪ್ರೇರಣೆ ಹೊಂದಿದ ಜನರು ಇಲ್ಲವಲ್ಲವೇ? ಇಲ್ಲ. ಅದ್ಭುತಗಳ ಯುಗವು ಮುಗಿದು ಹೋಗಿದೆ. ಹೀಗಿದ್ದರೂ, ಅವರ ಮಾತಾಡುವಿಕೆಯಲ್ಲಿ ಮಾತ್ರವೇ ಆತ್ಮನು ಅವರನ್ನು ನಡಿಸಲಿಲ್ಲ. ಅವರ ಬರಹಗಳಲ್ಲಿಯೂ ಆತನು ಅವರನ್ನು ನಡಿಸಿದನು. ಹೀಗೆ ಇಂದು ನಮ್ಮೊಂದಿಗೆ "ಮಾತಾಡುವದಕ್ಕೆ" ಅವರ ವಾಕ್ಯಗಳು ನಮಗಿವೆ. ಪರಿಶುದ್ಧ ಬರಹಗಳು ಪರಿಶುದ್ಧಾತ್ಮನ ವಾಕ್ಯವಾಗಿದೆ.

ಹಳೇ ಒಡಂಬಡಿಕೆಯಿಂದ ಒಂದು ಉಲ್ಲೇಖವು ಇಬ್ರಿಯ 3:7ರಲ್ಲಿ ಆತ್ಮನಿಗೆ ಸಂಬಂಧಿಸಲ್ಪಟ್ಟಿದೆ. ಹಳೇ ಕಾಲದ ಭಕ್ತ ಜನರಿಂದ ಪ್ರವಾದನೆಗಳು ಆತ್ಮನಿಂದ ಬಂದವೆಂದು 2 ಪೇತ್ರ

1:20, 21 ಹೇಳುತ್ತದೆ. ಹಾಗೆಯೇ 2 ತಿಮೊಥೆ 3:16 ಪರಿಶುದ್ಧ ಬರಹಗಳಿಗಾಗಿ ಪ್ರೇರಣೆಯನ್ನು ಸಾರುತ್ತದೆ. ಪ್ರಕಟನೆ 2 ಮತ್ತು 3ರಲ್ಲಿ ಸಭೆಗಳಿಗೆ ಪರಿಶುದ್ಧಾತ್ಮನು ಹೇಳುವದನ್ನು ಕೇಳ ಬೇಕೆಂದು ಯೋಹಾನನು ಸಭೆಗಳಿಗೆ ಪ್ರಬೋಧಿಸಿದನು. ಯೋಹಾನನು ಬರೆದ ಸಂದೇಶಕ್ಕೆ ವಿಧೇಯರಾಗುವದರಿಂದ ಅವರು ಇದನ್ನು ಮಾಡಬೇಕಾಗಿತ್ತು.

ಆತ್ಮನಿಗೂ ವಾಕ್ಯಕ್ಕೂ ಬಹಳ ಸಲ ಒಂದೇ ಕಾರ್ಯವು ವಹಿಸಿಕೊಡಲ್ಪಟ್ಟಿರುವುದು ಯಾಕೆ ಎಂಬುದನ್ನು ನಾವೀಗ ನೋಡುತ್ತೇವೆ. ಇಬ್ಬರೂ ಜೀವಕೊಡುವದರಲ್ಲಿ (ಯೋಹಾನ 6:63). ನೂತನ ಜನನದಲ್ಲಿ (ಯೋಹನ 3:5; 1 ಪೇತ್ರ 1:23) ಮತ್ತು ಶುದ್ಧೀಕರಿಸುವದರಲ್ಲಿ ಒಳಗೊಂಡಿರುವರು (1 ಕೊರಿಂಥ 6:11; ಯೋಹನ 17:17).

ಉದಾಹರಣೆಯಾಗಿ, ಶುದ್ಧೀಕರಣವನ್ನು ನಾವು ಯೋಚಿಸೋಣ. ಅದು ನಮ್ಮ ಪ್ರಶ್ನೆಯನ್ನು ಹೇಗೆ ಸ್ಪಷ್ಟಪಡಿಸುವದೆಂಬುದನ್ನು ನೋಡೋಣ. ಆತ್ಮನಿಂದ ಮತ್ತು ವಾಕ್ಯದಿಂದ ನಾವು ಶುದ್ಧೀಕರಿಸಲ್ಪಟ್ಟಿದ್ದೇವೆ. ಆತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ, ವಾಕ್ಯವು ಒಂದು ಸಾಧನವಾಗಿದೆ. ಅದು ಆತ್ಮನ ಖಡ್ಗವಾಗಿದೆ (ಎಫೆಸ 6:17). ಒಬ್ಬ ಮನುಷ್ಯನು ಕೊಡಲಿಯಿಂದ ಮರವನ್ನು ಕಡಿಯುತ್ತಾನೆ. ಈ ಕಾರ್ಯದಲ್ಲಿ ಇಬ್ಬರಿಗೂ ಭಾಗವಿದೆ. ಆದರೆ ಮನುಷ್ಯನು ಸಾಧನದ ಮುಖಾಂತರ ಕಾರ್ಯ ಮಾಡುತ್ತಾನೆ, ಆತ್ಮನು ತನ್ನ ಖಡ್ಗದಿಂದ ಕಾರ್ಯಮಾಡುತ್ತಾನೆ, ಆದರೆ ಅದಿಲ್ಲದೇ ಅಲ್ಲ.

## ಮುಕ್ತಾಯ

ಪರಿಶುದ್ಧಾತ್ಮನ ಬಗ್ಗೆ ಸತ್ಯವೇದವು ಬೋಧಿಸುವ ಪ್ರತಿಯೊಂದನ್ನು ನಾವು ಸ್ವೀಕರಿಸತಕ್ಕದು. ಪಾಪಿಯ ಹೃದಯದ ಮೇಲೆ ಆತನು ಹೇಗೆ ಕಾರ್ಯಸಾಧಿಸುವನು? ಅದು ಆತನ ವಾಕ್ಯದ ಮುಖಾಂತರವಾಗಿ. ಆತನು ಯಾವುದೇ ರಹಸ್ಯವಾದ ವಿಧಾನದಲ್ಲಿ ಕಾರ್ಯ ಮಾಡುವದಿಲ್ಲ. ಆತನ ಬೋಧನೆಗಳನ್ನೂ ಸ್ವೀಕರಿಸಿ ಅದಕ್ಕೆ ನಾವು ವಿಧೇಯರಾಗುವಾಗ, ನಾವು ಪರಿಶುದ್ಧಾತ್ಮನಿಂದ ನಡಿಸಲ್ಪಡುತ್ತೇವೆ. ಆತನಿಂದ ನಡಿಸಲ್ಪಡುವವರು ದೇವರ ಮಕ್ಕಳಾಗಿದ್ದಾರೆ (ರೋಮಾಪುರ 8:14). ನೀವು ಪರಿಶುದ್ಧಾತ್ಮನನ್ನು ಸ್ವೀಕರಿಸುವಿರೋ ಇಲ್ಲವೇ ಆತನನ್ನು ವಿರೋಧಿಸುತ್ತಿರುವಿರೋ?

© 2009 Truth for Today